ವಿಶ್ವ ಹಿಂದೂ ಪರಿಷತ್

# ಬಜರಂಗ ದಳ

ಗಾಂಧಿನಗರ, ತುಮಕೂರು

ಜಿಲ್ಲಾಧಿಕಾರಿಗಳ ಕಾರ್ಯಾಲಯ
ತುಮಕೂರು ಜಿಲ್ಲೆ, ತುಮಕೂರು.
13 DEC 2023
(ಕಿರು ಸಹಿ)

ಇವರಿಗೆ,

**ಮಾನ್ಯ ಜಿಲ್ಲಾಧಿಕಾರಿಗಳು**

ತುಮಕೂರು ಜಿಲ್ಲೆ, ತುಮಕೂರು.

ಮಾನ್ಯರೆ,

**ವಿಷಯ:-ತುಮಕೂರು ಜಿಲ್ಲೆಯಾದ್ಯಂತ ಡಿಸೆಂಬರ್ 31 ರಂದು ಆಂಗ್ಲ ಹೊಸ ವರ್ಷದ ನೆಪದಲ್ಲಿ ಅಶ್ಲೀಲ ನೃತ್ಯ ಮತ್ತು ಮಾದಕ ದ್ರವ್ಯಗಳ ಪಾನ ಪಾರ್ಟಿಗಳ ಕಾರ್ಯಕ್ರಮಗಳಿಗೆ ಅನುಮತಿ ನೀಡಬಾರದೆಂದು ಮತ್ತು ಡಿಸೆಂಬರ್ 31 ಮಧ್ಯರಾತ್ರಿ ಅಥವಾ ಜನವರಿ 1 ರಂದು ಪಟಾಕಿ ಹೊಡೆಯದಂತೆ ಕಟ್ಟು ನಿಟ್ಟು ಕ್ರಮ ಜರುಗಿಸಲು ಕೋರಿ ಮನವಿ**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಂಗ್ಲ ಹೊಸ ವರುಷದ ನೆಪದಲ್ಲಿ ಡಿಸೆಂಬರ್ 31 ರಂದು ಹಲವಾರು ಅರಣ್ಯ ಪ್ರದೇಶಗಳು, ಧಾರ್ಮಿಕ ಸ್ಥಳಗಳು ಹಾಗೂ ಹೋಟೆಲ್, ಲಾಡ್ಜ್, ಹೋಂಸ್ಟೆ, ರೆಸಾರ್ಟ್ ಮತ್ತು ಕೆಲವು ಸಾರ್ವಜನಿಕ/ಸರ್ಕಾರಿ ಸ್ಥಳಗಳಲ್ಲಿ ಅನೇಕ ರೀತಿಯ ಅಶ್ಲೀಲ ನೃತ್ಯ ಪಾರ್ಟಿಗಳು ಮತ್ತು ಮಾದಕ ದ್ರವ್ಯಗಳ ಪಾನ ಪಾರ್ಟಿಗಳನ್ನು ಆಯೋಜಿಸಿದ್ದು, ಧಾರ್ಮಿಕ ಸ್ಥಳಗಳಾದ ದೇವರಾಯನದುರ್ಗ ಅರಣ್ಯ, ನಾಮದ ಚಿಲುಮೆ, ಗೊರವನಹಳ್ಳಿ, ಬಸ್ತಿ ಬೆಟ್ಟ, ರಾಮದೇವರ ಬೆಟ್ಟ, ಚನ್ನರಾಯಣ ದುರ್ಗ, ಸಿದ್ದರಬೆಟ್ಟ, ಮಧುಗಿರಿ ಏಕಶಿಲಾ ಬೆಟ್ಟ, ಇನ್ನಿತರ ಧಾರ್ಮಿಕ ಸ್ಥಳಗಳಲ್ಲಿ ಮತ್ತು ಜಿಲ್ಲೆಯಾದ್ಯಂತ ಪ್ರವಾಸಿ ತಾಣಗಳು ಅನೇಕ ಆಸು ಪಾಸಿನಲ್ಲಿ ಅಕ್ರಮವಾಗಿ ಕಾನೂನು ಭಾಹಿರ ಮಾಧಕ ವ್ಯಸನಿಗಳ ಪಾರ್ಟಿಗಳನ್ನು ನಡೆಸಲು ಕೆಲವು ಪಾನ ಪ್ರಿಯರು ಮತ್ತು ಇವೆಂಟ್ ಮ್ಯಾನೇಜಿಂಗ್ ಸಂಸ್ಥೆಗಳು ಸಜ್ಜಾಗಿರುತ್ತಾರೆ.

ಆಂಗ್ಲ ಹೊಸ ವರುಷದ ಹೆಸರಿನಲ್ಲಿ ನಡೆಯುವ ಈ ಮೇಲ್ಕಂಡ ಕಾರ್ಯಕ್ರಮಗಳು ಪಾಶ್ಚಾತ್ಯ ಸಂಸ್ಕೃತಿಯಿಂದ ಕೂಡಿದ್ದು ಇದನ್ನು ಬಜರಂಗದಳ ತೀವ್ರವಾಗಿ ವಿರೋಧಿಸುತ್ತದೆ. ಈಗಾಗಲೇ ಲವ್ ಜಿಹಾದ್ ಹೆಸರಿನಲ್ಲಿ ಮುಗ್ಧ ಹಿಂದು ಹೆಣ್ಣು ಮಕ್ಕಳ ಮನಸ್ಸನ್ನು ಕೆಡಿಸಿ ಮೋಸದಿಂದ ಇಂತಹ ಕಾನೂನು ಭಾಹಿರ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಚೋದನೆ ನೀಡಲಾಗುತ್ತಿದೆ. ಕೇರಳ, ಬಿಹಾರ್, ರಾಜಸ್ಥಾನ್, ಪಶ್ಚಿಮ ಬಂಗಾಳ ಹಾಗೂ  ಅನೇಕ ರಾಜ್ಯಗಳ ಮುಸ್ಲಿಂ ಯುವಕರು ಇಂತಹ ಕೃತ್ಯಗಳಲ್ಲಿ ಸಕ್ರಿಯರಾಗಿದ್ದು ಡ್ರಗ್ಸ್ ಮಾಫಿಯಾ, ಸೆಕ್ಸ್ ಮಾಫಿಯಾದಂತಹ ಜಾಲಗಳು ವ್ಯಾಪಕವಾಗಿ ನಡೆಯುತ್ತಿದ್ದು, ಆದ್ದರಿಂದ ಯಾವುದೇ ಹೋಟೆಲ್, ಲಾಡ್ಜ್, ಹೋಂಸ್ಟೆ, ರೆಸಾರ್ಟ್, ಪ್ರವಾಸೀ ತಾಣಗಳು, ಧಾರ್ಮಿಕ ಕ್ಷೇತ್ರಗಳ ಸುತ್ತ ಮುತ್ತಲಿನ ಹಾಗೂ ಅರಣ್ಯಪ್ರದೇಶ ಮತ್ತು ಸಾರ್ವಜನಿಕ/ಸರ್ಕಾರಿ ಸ್ಥಳಗಳಲ್ಲಿ ಅಥವಾ ಅಕ್ರಮವಾಗಿ ಕೆಲವು ತೋಟಗಳಲ್ಲಿ ಆಂಗ್ಲ ಹೊಸ ವರುಷದ ಹೆಸರಿನಲ್ಲಿ ನಡೆಸಲು ಸಜ್ಜಾಗಿರುವ  ಮಾಧಕವ್ಯಸನಿಗಳ ಪಾರ್ಟಿ, ಅಶ್ಲೀಲ ನೃತ್ಯಗಳಿಗೆ ಅನುಮತಿ ನೀಡಬಾರದು.

ಡಿಸೆಂಬರ್ 31 ರಂದು ಎಲ್ಲಾ ಬಾರ್ ಮತ್ತು ಹೋಟೆಲ್‌ಗಳನ್ನು, ರೆಸ್ಟೋರೆಂಟ್ಗಳು, ರೆಸಾರ್ಟ್ಗಳನ್ನು ನಿಗಧಿತ ಸಮಯದೊಳಗೆ ಮುಚ್ಚಿಸಲು ಕ್ರಮಕೈಗೊಳ್ಳಬೇಕೆಂದು ಕೋರುತ್ತೇವೆ. ಯಾವುದೇ  ವ್ಯಕ್ತಿಗಳಿಗೆ ನಿಯಮ ಮೀರಿ ಹೆಚ್ಚಿನ ಮಧ್ಯ ದಾಸ್ತಾನು ಮಾರಾಟ ಮಾಡದಂತೆ ಕ್ರಮವಹಿಸಲು ಕೋರಿದೆ.  ನಿಯಮ ಮೀರಿ ಯಾವುದೇ ರೀತಿಯ ಅನುಮತಿ ನೀಡಿದಲ್ಲಿ ಮುಂದೆ ಆಗುವ ಎಲ್ಲಾ ರೀತಿಯ ಅನಾಹುತಗಳಿಗೆ ಸಂಬಂದಿಸಿದ ಎಲ್ಲಾ ಅಧಿಕಾರಿಗಳು ಮತ್ತು ಪೋಲೀಸ್ ಇಲಾಖೆ ನೇರ ಹೊಣೆಯಾಗಿರುತ್ತಾರೆ. ಸದರಿ ಈ ಬಗ್ಗೆ ಕೂಡಲೇ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ತಮ್ಮಲ್ಲಿ ಮನವಿ.

ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ - ಎ.ಎಸ್. ವಿಷ್ಣು ಭಾರತ್ VS. ಕರ್ನಾಟಕ ರಾಜ್ಯ ಮನು/ಕೆ.ಎ/1706/2021 – ಹೀಗೆ ಆದೇಶಿಸಲಾಗಿದೆ, "ಧ್ವನಿವರ್ಧಕಗಳ ಸಹಾಯದಿಂದ ತನ್ನ ಮಾತಿನ ಧ್ವನಿಯನ್ನು ವರ್ಧಿಸುವ ಮೂಲಕ ಶಬ್ದವನ್ನು ಸೃಷ್ಟಿಸುವ ಮೂಲಭೂತ ಹಕ್ಕನ್ನು ಯಾರೂ ಪಡೆಯಲು ಸಾಧ್ಯವಿಲ್ಲ. ಒಬ್ಬರಿಗೆ ಮಾತನಾಡುವ ಹಕ್ಕು ಇದ್ದರೆ, ಇತರರಿಗೆ ಕೇಳಲು ಅಥವಾ ಕೇಳಲು ನಿರಾಕರಿಸುವ ಹಕ್ಕಿದೆ. ಯಾರನ್ನೂ ಕೇಳಲು ಒತ್ತಾಯಿಸಲಾಗುವುದಿಲ್ಲ ಮತ್ತು ಅವರ ಧ್ವನಿಯನ್ನು ಇತರರ ಕಿವಿ ಅಥವಾ ಮನಸ್ಸಿನಲ್ಲಿ ಅತಿಕ್ರಮಿಸಲು ತನಗೆ ಹಕ್ಕಿದೆ ಎಂದು ಯಾರೂ ಹೇಳಿಕೊಳ್ಳುವುದಿಲ್ಲ. ಶ್ರವಣದ ಆಕ್ರಮಣಕ್ಕೆ ಯಾರೂ ಒಳಗಾಗಲು ಸಾಧ್ಯವಿಲ್ಲ. ಯಾರಾದರೂ ತನ್ನ ಮಾತಿನ ಪ್ರಮಾಣವನ್ನು ಹೆಚ್ಚಿಸಿದರೆ ಮತ್ತು ಕೃತಕ ಸಾಧನಗಳ ಸಹಾಯದಿಂದ ಅಹಿತಕರ ಅಥವಾ ಅಸಹ್ಯಕರ ಮಟ್ಟಕ್ಕೆ ಏರಿದ ಶಬ್ದವನ್ನು ಕೇಳಲು ಇಷ್ಟವಿಲ್ಲದ ವ್ಯಕ್ತಿಗಳನ್ನು ಕಡ್ಡಾಯವಾಗಿ ಬಹಿರಂಗಪಡಿಸಿದರೆ, ಮಾತನಾಡುವ ವ್ಯಕ್ತಿಯು ಶಾಂತಿಯುತ, ಆರಾಮದಾಯಕ ಮತ್ತು ಇತರರ ಹಕ್ಕನ್ನು ಉಲ್ಲಂಘಿಸುತ್ತಾನೆ. ಸಂವಿಧಾನದ 21 ನೇ ವಿಧಿಯಿಂದ ಮಾಲಿನ್ಯ-ಮುಕ್ತ ಜೀವನವನ್ನು ಖಾತರಿಪಡಿಸಲಾಗಿದೆ." ...... ಮಾನವರ ಮೇಲೆ ಶಬ್ದದ ಪರಿಣಾಮಗಳು ......... ಶಬ್ದದ ತೀವ್ರತೆ ಮತ್ತು ಅವಧಿಯನ್ನು ಅವಲಂಬಿಸಿ ಶಬ್ದವು ಶ್ರವಣೇಂದ್ರಿಯ ಮತ್ತು ಶ್ರವಣೇಂದ್ರಿಯವಲ್ಲದ ಪರಿಣಾಮಗಳನ್ನು ಹೊಂದಿರುತ್ತದೆ. ಇದು ನಿದ್ರೆ, ಶ್ರವಣ, ಸಂವಹನ, ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಇದು ಜನರಲ್ಲಿ ಹುಚ್ಚುತನಕ್ಕೂ ಕಾರಣವಾಗಬಹುದು. ಶಬ್ದವು ಕೆಲಸ, ವಿಶ್ರಾಂತಿ, ನಿದ್ರೆ ಮತ್ತು ಸಂವಹನವನ್ನು ತೊಂದರೆಗೊಳಿಸುತ್ತದೆ. ............ ಮತ್ತು ಇತರ ಮಾನಸಿಕ ಮತ್ತು ರೋಗಶಾಸ್ತ್ರೀಯ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು. .... ಮಾನವ ದೇಹದ ಮೇಲೆ ಶಬ್ದ ಮಾಲಿನ್ಯದ ತೀವ್ರವಾದ ಒತ್ತಡ, ಜೀರ್ಣಾಂಗ, ಅಸ್ಥಿಪಂಜರ-ಸ್ನಾಯು ವ್ಯವಸ್ಥೆ, ಅಧಿಕ ಒತ್ತಡ, ಹೃದ್ರೋಗ ಮತ್ತು ಇತರ ಪ್ರತಿಕೂಲ ಹಾರ್ಮೋನ್ ಮತ್ತು ಪರಿಣಾಮಗಳು, ತಲೆನೋವು, ನಿದ್ರಾಹೀನತೆ, ಒತ್ತಡ ಸೇರಿದಂತೆ ಮಾನಸಿಕ ಅಡಚಣೆಗಳನ್ನು ಉಂಟುಮಾಡುವುದನ್ನು ಒಳಗೊಂಡಿರುತ್ತದೆ."

ಇಂತಹ ಸಂಧರ್ಬದಲ್ಲಿ ತುಮಕೂರು ಜಿಲ್ಲೆಯಾದ್ಯಂತ ಡಿಸೆಂಬರ್ 31 ರಂದು ಆಂಗ್ಲ ಹೊಸ ವರ್ಷದ ನೆಪದಲ್ಲಿ ಅಶ್ಲೀಲ ನೃತ್ಯ ಮತ್ತು ಮಾದಕ ದ್ರವ್ಯಗಳ ಪಾನ ಪಾರ್ಟಿಗಳ ಕಾರ್ಯಕ್ರಮಗಳಿಗೆ ಅನುಮತಿ ನೀಡಬಾರದೆಂದು ಮತ್ತು ಅನುಮತಿ ಇಲ್ಲದೆಯೂ ಅಕ್ರಮವಾಗಿ ಯಾರೂ ನಡೆಸದಂತೆ ಕ್ರಮ ಜರುಗಿಸಲು ಹಾಗೂ ಡಿಸೆಂಬರ್ 31 ಮಧ್ಯರಾತ್ರಿ ಅಥವಾ ಜನವರಿ 1 ರಂದು ಶಬ್ದಕಾರಕ ಮತ್ತು ಮಾಲಿನ್ಯ ಕಾರಕ ಪಟಾಕಿ ಹೊಡೆಯದಂತೆ ಕಟ್ಟು ನಿಟ್ಟು ಕ್ರಮ ಜರುಗಿಸಲು ಕೋರಿ ಮನವಿ

ವಂದನೆಗಳೊಂದಿಗೆ

(ಮಂಜುಭಾರ್ಗವ ಆರ್. ಕೆ)

ಸಂಯೋಜಕರು ತುಮಕೂರು ವಿಭಾಗ